ಇಂದು ದಿನಾಂಕಃ 16.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿಯ ಪರ ಶ್ರೀ ವಿ ವಿ ಎಂ ವಕೀಲರಿಂದಃ

ನಾನು ರುದ್ರಪ್ಪ ರವರನ್ನು ಮದುವೆಯಾಗಿ ಸುಮಾರು 34 ವರ್ಷ ಆಗಿರುತ್ತದೆ. ದಾವಾ ಆಸ್ತಿಗಳು ಮೂಲತಃ ಒಡ್ಡಿನಕಟ್ಟಿ ಆಸ್ತಿಗಳು ಎಂದರೆ ಸರಿ. ಸದರಿ ಒಡ್ಡಿನಕಟ್ಟಿ ಗ್ರಾಮ ಅಸ್ಥಿತ್ವದಲ್ಲಿ ಇಲ್ಲ ಎಂದರೆ ಸರಿ. ಸದರಿ ಗ್ರಾಮದ ಆಸ್ತಿಗಳು ಹಿರೇಕರೊರ ಗ್ರಾಮದ ವ್ಯಾಪ್ತಿಯಲ್ಲಿ ಮಿಲನಗೊಂಡಿವೆ ಎಂದರೆ ಸರಿ. ಸದರಿ ಒಡ್ಡಿನಕಟ್ಟಿ ಗಾಮದ ಕಂದಾಯದ ಆಸ್ತಿಗಳು ಹಿರೇಕೆರೂರ-ಮಾಸೂರು ರಸ್ತೆಗೆ ಹೊಂದಿ ಪೂರ್ವ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ಹಿರೇಕೆರೂರನಿಂದ ಮಾಸೂರಿಗೆ ಹೋಗುವ ರಸ್ತೆ ಉತ್ತರದಿಂದ ದಕ್ಷಿಣಾಭಿಮುಖವಾಗಿ ಇರುತ್ತದೆ ಎಂದರೆ ಸರಿ. ಸದರಿ ಹಿರೇಕೆರೂರ ಮಾಸೂರು ರಸ್ತೆಯಿಂದ ಸುಮಾರು 500 ಮೀಟರ್ ಅಂತರದಲ್ಲಿ ಒಡ್ಡಿನಕಟ್ಟಿ ಗ್ರಾಮದ ಜನವಸತಿ ಪ್ರದೇಶ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯ ಮಧ್ಯದಲ್ಲಿ ಒಂದು ಕೆರೆ ಬರುತ್ತದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಒಡ್ಡಿನಕಟ್ಟಿ ಗಾಮವು ಕೂಡ ಹಿರೇಕೆರೂರ-ಮಾಸೂರು ರಸ್ತೆಯ ಪೂರ್ವ ದಿಕ್ಕಿಗೆ ಇತ್ತು ಎಂದರೆ ಸರಿ. ಸದರಿ ಹಿರೇಕರೊರ ಮಾಸೂರು ರಸ್ತೆಯ ಹಾಗೂ ಒಡ್ಡಿನಕಟ್ಟಿ ಗ್ರಾಮದ ನಡುವೆ ಒಂದು ಕಲ್ಲು ಹಾಕಿರುವ ಕಚ್ಚಾ ರಸ್ತೆ ಇರತ್ತದೆ ಎಂದರೆ ಸಾಕ್ಷಿಯು ಕಾಲು ದಾರಿ ಇರುತ್ತದೆ ಎಂದು ನುಡಿದಿರತ್ತಾರೆ. ಸದರಿ ರಸ್ತೆ ಚಕ್ಕಡಿ, ಟ್ರಾಕ್ಟರ್ ಹಾಗೂ ಬಂಡಿ ಅವುಗಳನ್ನು ತೆಗೆದುಕೊಂಡು ಹೋಗುವಷ್ಟು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ದಾರಿ ಕಾಲು ದಾರಿ ಆಗಿರುತ್ತದೆ ಎಂದು ನುಡಿದಿರತ್ತಾರೆ. ಸದರಿ ರಸ್ತೆಯ ಮೂಲಕ ಟ್ರಾಕ್ಟರ, ಚಕ್ಕಡಿ ಹಾಗೂ ಬಂಡಿ ಓಡಾಡುತ್ತವೆ ಎಂದರೆ ಸರಿ.

2. ಸದರಿ ಒಡ್ಡಿನಕಟ್ಟಿ ಗ್ರಾಮದ ಕಂದಾಯ ಆಸ್ತಿಗಳ ಪೂರ್ವಕ್ಕೆ ಹೊಸಳ್ಳಿ ಎಂಬ ಗ್ರಾಮದ ಕಂದಾಯದ ಹದ್ದು ಇರುತ್ತದೆ ಎಂದರೆ ಸರಿ. ಒಡ್ಡಿನಕಟಿಟ ಗ್ರಾಮದಲ್ಲಿ ಬಸವನ ಗುಡಿ ದೇವಸ್ಥಾನ ಇದಿದ್ದು ಅಲ್ಲಿಗೆ ಭಕ್ತರು ಸುಮಾರು ಜನ ಬರುತ್ತಾರೆ ಎಂದರೆ ಸಾಕ್ಷಿಯು ಅಲ್ಲಿನ ಸುತ್ತ ಮುತ್ತಲಿನ ಹೊಲದ ಜನರು ಹಣ್ಣು ಕಾಯಿ ಮಾಡಿಸುತ್ತಾರೆ ಎಂದು ನುಡಿದಿರುತ್ತಾರೆ ಹಾಗೂ ದಿನಾ ಪೂಜೆ ಆಗುತ್ತದೆ ಎಂದು ನುಡಿದಿರತ್ತಾರೆ. ಪ್ರತೀ ವರ್ಷ ಪರಾವು (ಪ್ರಸಾದ ವಿತರಣೆ) ಯನ್ನು ಮಾಡುತ್ತೇವೆ. ಅಲ್ಲಿಗೆ ಹೊಸಳ್ಳಿ ಗ್ರಾಮದವರು ಬರುತ್ತಾರೆ ಎಂದರೆ ನನಗೆ ಅಷ್ಟು ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.